**ಸಾಕ್ಷಿಯನ್ನು ದಿ 05-03-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ವಿಶೇಷ ಸ.ಸಾ.ಅ. ರವರಿಂದಃ**

ಪಿ.ಎಫ್ ಸಂಖ್ಯೆಃ 40/2004 ರ ಪ್ರಕಾರ 45 ಪೆ ಆರ್ಡರ್ ಗಳನ್ನು ನೀಡಿದ್ದು ಅವುಗಳನ್ನು ಒಟ್ಟಿಗೆ ಈಗಾಗಲೇ ನಿಪಿ-276 ಎಂದು ಗುರುತಿಸಲ್ಪಟ್ಟಿರುತ್ತದೆ. ಸದರಿ 45 ಪೆ ಆರ್ಡರ್ ಗಳು ಈ ಒಂದು ಕೃತ್ಯಕ್ಕೆ ಸಂಬಂದಿಸಿದಂತೆ ಆರೋಪಿಗಳು ಮತ್ತು ಬ್ಯಾಂಕಿನ ಇತರೆ ಅಧಿಕಾರಿಗಳು ಬೆಂಗಳೂರು ನಗರದ, ಬೇಗೂರು ಹೋಬಳಿಯ ಎ.ಎಂ ಶಿವರಾಮ ರೆಡ್ಡಿ ಮತ್ತು ಅವರ ಕುಟುಂಬದವರಿಗೆ ಬೇಗೂರು ಹೋಬಳಿಯ, ಎಳ್ಳು ಕುಂಟೆ ಗ್ರಾಮದ ಸರ್ವೆನಂಃ 31 ಹಾಗೂ ಹರಳುಕುಂಟೆ ಗ್ರಾಮದ ಸರ್ವೆ ನಂಃ 69 ರಲ್ಲಿ ಜಮೀನು ಖರೀದಿಸಲು ಮುಂಗಡವಾಗಿ ಕೊಟ್ಟಿರುವ ಹಣವಾಗಿರುತ್ತದೆ. ಅದಕ್ಕೆ ಸಂಬಂಧಿಸಿದ ವಿವರಣೆ ನಿಪಿ-276 ರ ದಾಖಲೆಗಳಲ್ಲಿ ನಮೂದಿಸಲಾಗಿರುತ್ತದೆ.

ಸದರಿ ದುರುಪಯೋಗದ ಬಗ್ಗೆ ತಿಳಿದು ಬಂದ ಮೇಲೆ ಬ್ಯಾಂಕಿನ ಅಧಿಕಾರಿಗಳು ಬ್ಯಾಂಕಿನ ಸಿಬ್ಬಂದಿಗಳನ್ನು ಕರೆಯಿಸಿ ಅವರನ್ನು ಕುರಿತು ನಿಮಗೆ ಹೆಚ್.ಎಸ್.ಆರ್ ಲೇಔಟ್ ನಲ್ಲಿ ನಿವೇಶನಗಳನ್ನು ಮಾಡಿಕೊಡುತ್ತೇವೆ, ನೀವೆಲ್ಲಾ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿ ಎಂದು ಅವರಿಗೆ ಆಶ್ವಾಸನೆ ನೀಡಿ, ನಂತರ ಅವರಿಂದ ಅರ್ಜಿಗಳನ್ನು ತೆಗೆದುಕೊಂಡು, ಅವರಿಗೆ ಸಾಲವನ್ನು ಮಂಜೂರುಮಾಡಿದಂತೆ ಎಂಟ್ರಿಗಳನ್ನು ತೋರಿಸಿ ನಂತರ ಸದರಿ ಹಣವನ್ನು ನಕಲಿಯಾಗಿ ಮಾಡಿದ ಖಾತೆಗಳನ್ನು ಮುಕ್ತಾಯಗೊಳಿಸಲು ಉಪಯೋಗಿಸಿಕೊಂಡು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಸದರಿ ಸಾಲ ಮಂಜೂರಾದ ಬಗ್ಗೆ ಮತ್ತು ಅದನ್ನು ನಕಲಿ ಖಾತೆಗಳನ್ನು ಮುಕ್ತಯಗೊಳಿಸಲು ಉಪಯೋಗಿಸಿದ ಬಗ್ಗೆ ಕೇವಲ ಬುಕ್ಕುಗಳಲ್ಲಿ ಮಾತ್ರ ಕಾಣಿಸಿರುತ್ತಾರೆ, ಆದರೆ ನಿಜವಾಗಿ ಹಣ ವರ್ಗಾವಣೆಯಾಗಿರುವುದಿಲ್ಲ.

ಬ್ಯಾಂಕಿನ ಬಹುತೇಕ ಅಧಿಕಾರಿಗಳು ಬ್ಯಾಂಕಿನ ಹಣವನ್ನು ರಿಯಲ್ ಎಸ್ಟೇಟ್ ಮತ್ತು ಇತರೆ ವಹಿವಾಟುಗಳಿಗೆ ಕಾಲಕ್ರಮೇಣ ದುರುಪಯೋಗ ಪಡಿಸಿಕೊಳ್ಳುತ್ತಾ ಬಂದಿರುತ್ತಾರೆ. ಅದರಂತೆ ಎಳ್ಳುಕುಂಟೆ ಮತ್ತು ಹರಳುಕುಂಟೆ ಗ್ರಾಮದ ಜಮೀನುಗಳಿಗೆ ಸಂಬಂಧಿಸಿ ಮುಂಗಡ ಹಣವನ್ನು ನೀಡಿದ್ದು, ಆದರೆ ಸದರಿ ಜಮೀನುಗಳು ಸರ್ಕಾರದ ಜಮೀನುಗಳು ಎಂದು ನಿರ್ದಾರವಾದ ಕಾರಣ ಅವುಗಳನ್ನು ಪಡೆದುಕೊಳ್ಳಲು ಆಗಿರುವುದಿಲ್ಲ. ಆ ಕಾರಣದಿಂದ ನಕಲಿ ಖಾತೆಗಳನ್ನು ಮುಕ್ತಾಯಗೊಳಿಸಲು ಆಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಈ ಒಂದು ಅಕ್ರಮ ಬಯಲಿಗೆ ಬಂದಿರುತ್ತದೆ. ನಂತರ ನನಗೆ ವರ್ಗಾವಣೆ ಆಗಿದ್ದ ಕಾರಣ ದಿನಾಂಕಃ 20-

03-2004 ರಂದು ನಾನು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ರವಿಶಂಕರ್ ಎಂಬುವವರಿಗೆ ವರ್ಗಾಯಿಸಿರುತ್ತೇನೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ. ಎ.ಪಿ ವಕೀಲರಿಂದಃ</u>**

ದಿನಾಂಕಃ28-09-2003 ರಂದು ಎಸ್.ಪಿ ಸಿ.ಓ.ಡಿ ರವರು ಮಾಡಿದ ಆದೇಶದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 2ನೇ ಆರೋಪಿಯ ಮನೆಯನ್ನು ಶೋದನೆ ಮಾಡಲು ನನ್ನ ಹಿಂದಿನ ತನಿಖಾಧಿಕಾರಿಯು ನ್ಯಾಯಾಲಯದಿಂದ ಆದೇಶವನ್ನು ಪಡೆದಿದ್ದರು. ಈ ರೀತಿ ಶೋಧನೆ ಮಾಡುವ ಮೊದಲು 2ನೇ ಆರೋಪಿಗೆ ನೋಟಿಸನ್ನು ಕೊಟ್ಟಿರುತ್ತೇನೆ. ನಿಪಿ-275ರಲ್ಲಿ ತೋರಿಸಿದಂತೆ ಯಾವುದೇ ಕಂಪ್ಯೂಟರ್ ಗಳನ್ನು, ದಾಖಲೆಗಳನ್ನು ಮತ್ತು ಖಾಲಿ ಹಾಳೆಗಳನ್ನು ಮತ್ತು ಪ್ರಮಾಣ ಪತ್ರಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಶೋಧನೆಗಾಗಿ 2ನೇ ಆರೋಪಿಯ ಮನೆಗೆ ಹೋದಾಗ 2ನೇ ಆರೋಪಿಯ ಕುಟುಂಬದವರು ಅಲ್ಲಿ ಇರಲಿಲ್ಲ. ನಾನು ತನಿಖಾಧಿಕಾರಿಗಳ ಜೊತೆ 2ನೇ ಆರೋಪಿಯ ಮನೆಗೆ ಹೋಗಿರುವುದಿಲ್ಲ ಮತ್ತು ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕಃ27-08-2003 ರಂದು 1ನೇ ಆರೋಪಿಯ ಮನೆಗೆ ಶೋದನೆಗಾಗಿ ಹೋದಾಗ ಪಂಚನಾಮೆಯನ್ನು ಜರುಗಿಸಿರುತ್ತೇವೆ. ಅಲ್ಲಿ ಯಾವುದೇ ವಸ್ತುಗಳನ್ನು ನಾವು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯ ಮನೆಯನ್ನು ಶೋದನೆ ಮಾಡಲು ನನ್ನ ಹಿಂದಿನ ತನಿಖಾಧಿಕಾರಿಯು ನ್ಯಾಯಾಲಯದಿಂದ ಆದೇಶವನ್ನು ಪಡೆದಿದ್ದರು. ಈ ರೀತಿ ಶೋಧನೆ ಮಾಡುವ ಮೊದಲು 1ನೇ ಆರೋಪಿಗೆ ನೋಟಿಸನ್ನು ಕೊಟ್ಟಿರುತ್ತೇನೆ. ನಾವು ಶೋಧನೆಗಾಗಿ 1ನೇ ಆರೋಪಿಯ ಮನೆಗೆ ಹೋದಾಗ 1ನೇ ಆರೋಪಿಯ ಕುಟುಂಬದವರು ಅಲ್ಲಿ ಇರಲಿಲ್ಲ. ನಾನು ತನಿಖಾಧಿಕಾರಿಗಳ ಜೊತೆ 1ನೇ ಆರೋಪಿಯ ಮನೆಗೆ ಹೋಗಿರುವುದಿಲ್ಲ ಮತ್ತು ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಈ ಹಿಂದೆ ನಾನು ಹೇಳಿದಂತೆ ಚಾಸಾ-4 ರಿಂದ ಚಾಸಾ-46 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಮತ್ತು ಅವರು ನನ್ನ ಮುಂದೆ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು ತನಿಖೆಗಾಗಿ ದಿನಾಂಕಃ 01-03-2004 ರಂದು ತೆಗೆದುಕೊಂಡಿದ್ದೇನೆ.

ದಿನಾಂಕಃ 21-02-2004 ರಂದು ಕೆ.ಜಿ ರಸ್ತೆಯ ಬ್ಯಾಂಕ್ ಆಫ್ ಬರೋಡ ಶಾಖೆಗೆ ಪ್ರಶ್ನಿತ ಖಾತೆಗೆ ಸಂಬಂಧಿಸಿ ದಿನಾಂಕಃ 06-05-1997 ರಿಂದ 12-04-1998ರ ಸಮಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುಂತೆ ನೋಟಿಸನ್ನು ನೀಡಿರುತ್ತೇನೆ. ಸದರಿ ಖಾತೆಯು ರೆಹಮಾನ್ ಖಾನ್ ಎಂಬುವವರ ಹೆಸರಿನಲ್ಲಿ ಇತ್ತು. ಸದರಿ ರೆಹಮಾನ್ ಖಾನ್ ರವರು ಆ ಸಮಯಕ್ಕೆ ಅಮಾನತ್ ಕೊ-ಅಪರೇಟಿವ್ ಬ್ಯಾಂಕಿನ ಅಧ್ಯಕ್ಷರಾಗಿದ್ದರು.

ನನ್ನ ತನಿಖೆಯ ಸಮಯದಲ್ಲಿ ಕೆ.ಜಿ ರಸ್ತೆಯ ಬ್ಯಾಂಕ್ ಆಫ್ ಬರೋಡ ಶಾಖೆಯವರು ದಾಖಲೆಗಳನ್ನು ಮರಳಿ ಕೊಟ್ಟ ಬಗ್ಗೆ ದಿನಾಂಕಃ 01-06-2006 ರಂದು ನೀಡಿದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ, ಕಾರಣ ಸದರಿ ದಾಖಲೆಯನ್ನು ನನ್ನ ಮುಂದಿನ ತನಿಖಾಧಿಕಾರಿಯು ನೀಡಿರುತ್ತಾರೆ. ನಾನು ಬ್ಯಾಂಕಿಗೆ ಹೋಗಿ ನಕಲಿ ಖಾತೆಗಳಿಗೆ ಸಂಬಂಧಿಸಿ ಪೋಸ್ಟಲ್ ಕವರ್ ಗಳನ್ನು ಕಳುಹಿಸಿದ ಬಗ್ಗೆ ಬ್ಯಾಂಕಿನಲ್ಲಿ ಇರುವ ಎಂಟ್ರಿಗಳಿಗೆ ಸಂಬಂಧಿಸಿ ಔಟ್ ವರ್ಡ್ ಮತ್ತು ಇನ್ ವರ್ಡ್ ದಾಖಲೆಗಳನ್ನು ನಾನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಈ ಕುರಿತು ಅಂಚೆ ಇಲಾಖೆಯವರೂ ಸಹ ವಿಚಾರಣೆ ಮಾಡಿರುವುದಿಲ್ಲ. ಸದರಿ ಕವರ್ ಗಳನ್ನು ಯಾರು ಕಳುಹಿಸಿರುತ್ತಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ.

45 ಪೆ ಆರ್ಡರ್ ಗಳಿಗೆ ಸಂಬಂಧಿಸಿ ಬ್ಯಾಂಕಿನ ಅಧಿಕಾರಿಗಳಿಗೆ ನೋಟಿಸನ್ನು ಕೊಟ್ಟಿರುತ್ತೇನೆ, ಆದರೆ ವಿವರಣೆಯನ್ನು ಕೇಳಿ ನೋಟಿಸನ್ನು ಕೊಟ್ಟಿರುವುದಿಲ್ಲ. ನಿಪಿ-276ಕ್ಕೆ ಸಂಬಂಧಿಸಿದ 42 ಪೋಸ್ಟಲ್ ಕವರ್ ಗಳನ್ನು ಮೊಹಮ್ಮದ್ ಸಮಿಉಲ್ಲಾ ಖಾನ್ ಎಂಬುವವರು ಹಾಜರುಪಡಿಸಿರುತ್ತಾರೆ. ಸದರಿ ಕವರುಗಳನ್ನು ಯಾವುದೇ ಸೀಲು ಮಾಡದೆ ತೆಗೆದುಕೊಂಡು ಬಂದಿದ್ದರು. ಸದರಿ ಮೊಹಮ್ಮದ್ ಸಮಿಉಲ್ಲಾ ಖಾನ್ ಎಂಬುವವರು ಕಾನೂನು ಅಧಿಕಾರಿಯಾಗಿದ್ದರು, ಆದರೆ ಸದರಿ ದಾಖಲೆಗಳನು ಅವರ ಸುಪರ್ದಿಯಲ್ಲಿ ಇರಲಿಲ್ಲ. ಸದರಿ ದಾಖಲೆಗಳನ್ನು ತೆಗೆದುಕೊಳ್ಳುವ ಸಮಯದಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ, ಆದರೆ ಮಾಲುಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲೆಗೆ ಸಿ.ಐ.ಡಿ ಕಛೇರಿಗೆ ತಂದು ಹಾಜರುಪಡಿಸಿದ್ದರು.

ನಾನು ಸದರಿ ಅಂಚೆ ಲಕೋಟೆಗಳಲ್ಲಿ ನಮೂದಿಸಿದ ವಿಳಾಸಗಳಿಗೆ ಬೇಟಿ ನೀಡಿರುತ್ತೇನೆ. ಆದರೆ ಅಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ಆದರೆ ಅಲ್ಲಿ ವಿಚಾರಿಸಲಾಗಿ ಸದರಿ ವಿಳಾಸಗಳು ತಪ್ಪು ಎಂದು ತಿಳಿದುಬಂದಿರುತ್ತವೆ. ಅಲ್ಲಿ ನಾನು ವಿಚಾರಿಸಿದ ವ್ಯಕ್ತಿಗಳ ಹೆಸರುಗಳನ್ನು ಹೇಳಲು ಆಗುವುದಿಲ್ಲ. ನನ್ನ ಮುಂದೆ ಯಾವುದೇ ವ್ಯಕ್ತಿ ಸದರಿ ಅಂಚೆ ಲಕೋಟೆಗಳನ್ನು ಹಾಜುರುಪಡಿಸಿರುವುದಿಲ್ಲ ಮತ್ತು ನಾನು ಯಾವುದೇ ಸ್ಥಳಕ್ಕೆ ಬೇಟಿ ನೀಡಿ ವಿಚಾರಿಸಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಬ್ಯಾಂಕಿನ ನಿರ್ದೇಶಕರ ಆದೇಶದ ಮೇರೆಗೆ ಸದರಿ ಅಂಚೆ ಲಕೋಟೆಗಳನ್ನು ಕಳುಹಿಸಿರಬಹುದು. ನಾನು ಬ್ಯಾಂಕುಗಳಿಂದ ಯಾವುದೇ ವಿವರಣೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿವರಣೆಯು ಈ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ.

ಬ್ಯಾಂಕಿನ ಅಧ್ಯಕ್ಷರಾಗಿದ್ದ ಚಾಸಾ-53 ರವರ ಮಾದರಿ ಬರವಣಿಗೆಯನ್ನು ಪಂಚನಾಮೆ ಮೂಲಕ ತೆಗೆದುಕೊಂಡಿರುತ್ತೇನೆ. ಸದರಿ ಬರವಣಿಗಳನ್ನು ಬ್ಯಾಂಕ್ ಆಫ್ ಬರೋಡ ದಲ್ಲಿ ಅಕೌಂಟ್ ಓಪನಿಂಗ್ ಫಾರ್ಮ್ ಮತ್ತು ಹಣ ನಗದೀಕರಣ ಮಾಡಿದ ಪ್ರಶ್ನಿತ ಚೆಕ್ಕುಗಳಲ್ಲಿ ಇರುವ ಸಹಿಗಳೊಂದಿಗೆ ತಾಳೆ ಮಾಡಲು ತೆಗೆದುಕೊಂಡಿದ್ದೆ. ನನ್ನ ಮುಖ್ಯವಿಚಾರಣೆಯ ನಾಲ್ಕನೇ ಪುಟದಲ್ಲಿ ಮತ್ತು ಐದನೇ ಪುಟದ ಮೊದಲನೇಯ ಖಂಡಿಕೆಯಲ್ಲಿ ಹೇಳಿರುವ  ಎಲ್ಲಾ ಅಂಶಗಳು ಚಾಸಾ-53 ರವರಿಗೆ ಸಂಬಂಧಿಸಿದ್ದು ಎಂದರೆ ಸರಿ. ಎರಡು ಕೋಟಿ ಹಣಕ್ಕೆ ಸಂಬಂಧಿಸಿದ ದಾಖಲೆಗಳು ಹಾಳಾಗಿರುತ್ತವೆ ಎಂಬ ಬಗ್ಗೆ ನನಗೆ ಬ್ಯಾಂಕಿಗೆ ಹೋಗಿ ವಿಚಾರಿಸಿದಾಗ ತಿಳಿದುಬಂದಿರುತ್ತದೆ. ಈ ಬಗ್ಗೆ ವಿಚಾರವನ್ನು ಪ್ರಾಸಾ-8 ರವರಾದ ಮರ್ಸಿ ಸಬಾಸ್ಟೀನ್ ರವರು ತಿಳಿಸಿದ್ದರು.

ನನ್ನ ಮುಖ್ಯವಿಚಾರಣೆಯ ಐದನೇ ಪುಟದ, 2ನೇ ಕಂಡಿಕೆಯಲ್ಲಿ ಹೇಳಿದ ಮೂರು ಪೆ ಆರ್ಡರ್ ಗಳು ಮೂರು ಪ್ರಶ್ನಿತಾ ಖಾತೆಗಳಿಗೆ ಸಂಬಂಧಿಸಿದ್ದವು ಆಗಿರುತ್ತವೆ.

**ಮುಂದುವರೆದ ಪಾಟಿಸವಾಲಿಗೆ ಆರೋಪಿ ಪರ ಶ್ರೀ ಕೆ. ಎ.ಪಿ ವಕೀಲರು ಸಮಯವಕಾಶ ಕೋರಿರುತ್ತಾರೆ, ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ಮ. ದಂ. ನ್ಯಾ